ಕಡೆಯ ಅನುಕ್ರಮಣಿಕೆಯ 'ಬಯಲಾಟ' ಕತೆಯನ್ನು ಓದಲು ಶುರು ಮಾಡಿದೆ, ಎರಡ್ಮೂರು ಪ್ಯಾರಾಕ್ಕೇ ಅದು ನನ್ನ ಕತೆಯೇ ಅಂತ ಗೊತ್ತಾಗಿ ಹೋಯಿತು. ಬೆವರಿದೆ, ಮುಂದೇನಿದೆಯೋ ಅಂತ ಕೈ ನಡುಗುತ್ತಾ ದಡದಡ ಓದಲಾರಂಭಿಸಿದೆ. ಮುಗಿಸುವವರೆಗೆ ಸಮಾಧಾನ ಸಿಗದೇ, ಹಿಂದಿನ ಕತೆಗಿಂತ ಹತ್ತು ಪಟ್ಟು ಹೆಚ್ಚಿನ ವೇಗದಲ್ಲಿ ಕತೆ ಓದಿ ಮುಗಿಸಿಬಿಟ್ಟೆ.

ಯಥಾವತ್ ನನ್ನ ಪಾತ್ರ ಇದ್ದರೂ ಹೆಸರು ಬೇರೆ, ಕೆಲವೊಂದಷ್ಟು ವಿವರಗಳು ಬೇರೆ, ಕೆಲವಷ್ಟು ಸೂಚ್ಯ, ಕೆಲವಷ್ಟು ವಾಚ್ಯ. ಆದರೆ ಅಲ್ಲಿರುವವನು ನಾನೇ.

ಕೊನೆಯ ವರ್ಷದ ಡಿಗ್ರಿಯಲ್ಲಿ ನಾವೆಲ್ಲಾ ಎನ್ನೆಸ್ಸೆಸ್ಸು ಕ್ಯಾಂಪಿಗೆ ಹೋಗಿದ್ದೆವು. ಆ ಕ್ಯಾಂಪ್ ಮಧ್ಯೆ ಲೀಡರ್‌ಗಳ ಕಣ್ಣು ತಪ್ಪಿಸಿ, ವಿಶ್ವಜಿತ್, ನಾನು, ರಮಾಕಾಂತ ಮತ್ತು ಸುರಭಿ ಕುಮಾರಪರ್ವತ ಏರುವುದಕ್ಕೆ ನಿರ್ಧರಿಸಿ ಶ್ರಮದಾನದ ಮಧ್ಯೆ ಹೊರಟೇಬಿಟ್ಟೆವು. ಆವಾಗ ಆ ಹತ್ತು ದಿನದಲ್ಲಿ ಊರಲ್ಲಿ ನಮ್ಮಂಥ ಯಾರೇ ಅಪರಿಚಿತರು ಸಿಕ್ಕರೂ ಅವರು ಕ್ಯಾಂಪಿಗೆ ಬಂದವರು ಅಂತ ಊರವರು ಭಾವಿಸುತ್ತಿದ್ದರು. ಅದೇ ನಮಗೆ ವರವಾಯಿತು. ನಮ್ಮನ್ನು ಯಾರೂ ತಡೆಯಲಿಲ್ಲ. ಸಿಗುವ ದಾರಿಗಳನ್ನು ಕುಮಾರಪರ್ವತಕ್ಕೆ ಏರುವ ದಾರಿಯೇ ಅಂತ ಭಾವಿಸಿ, ಹತ್ತಿ ಬಿದ್ದು, ಕೂತು, ಎದ್ದು, ಸಿಕ್ಕ ತೊರೆಯ ನೀರನ್ನೆಲ್ಲಾ ಗಟಗಟ ಕುಡಿದು, ತೊಟ್ಟ ಅಂಗಿ ಬೆವರಿ ಒದ್ದೆಯಾದಾಗ ಅದನ್ನೇ ತೆಗೆದು ಸೊಂಟಕ್ಕೆ ಕಟ್ಟಿಕೊಂಡು, ಉಂಗುಷ್ಠ ಹರಿದ ಚಪ್ಪಲಿಯನ್ನು ಅಲ್ಲೇ ಸರಿ ಮಾಡಿ ಹಾಕಿಕೊಳ್ಳುತ್ತಾ, ಸಿಕ್ಕ ಕೋಲನ್ನು ಮುರಿದು ಅದನ್ನೇ ಆಧಾರಕ್ಕೆ ಊರುತ್ತಾ ಬೆಟ್ಟ ಹತ್ತುತ್ತಾ ಹೋಗುತ್ತಿದ್ದರೆ ಬೆಟ್ಟ ಮಾತ್ರ ನಮ್ಮನ್ನು ಬಿಟ್ಟು ಮೇಲಮೇಲಕ್ಕೆ ಹೋಗುತ್ತಿತ್ತು. ಕಡೆಗೂ ಬೆಟ್ಟದ ಮೇಲೆ ವಿಕ್ರಮ ಸಾಧಿಸಿ ತುತ್ತ ತುದಿ ಏರಿದಾಗ ಸಂಜೆ ನಾಲ್ಕರ ಹೊತ್ತು.

ತಂದ ನೀರೆಲ್ಲಾ ಖಾಲಿಯಾಗಿತ್ತು. ಹೊಟ್ಟೆಯಲ್ಲಿ ಪ್ರಾಣಾಂತಿಕ ಹಸಿವು. ನೆತ್ತಿ ಮೇಲೆ ಬಿಸಿಲಿನ ತಪ್ಪಲೆ. ಮೈಕೈಯಲ್ಲಿ ಧಾರಾಕಾರ ಪ್ರವಾಹ. ಕಾಲೆಲ್ಲಾ ಕಟ್ಟಿಗೆ. ತುಂಬ ಜೋಕು ಹೇಳಿ ನಗಿಸುವ ರಮಾಕಾಂತ ಕೂಡ ಉಸ್ಸಪ್ಪಾ ಅಂತ ಗುಡ್ಡದ ಮೈಮೇಲೆ ಬಿದ್ದುಕೊಂಡುಬಿಟ್ಟ. ಶಕ್ತಿಶಾಲಿ, ಒರಟನಾದ ನನಗಂತೂ ಜೀವ ಬಾಯಿಗೆ ಬಂದಂತಾಗಿತ್ತು. ನಮಗೆ ಬಹಳ ಅಚ್ಚರಿ ಅನ್ನಿಸಿದ್ದು ಸುರಭಿ ಹೇಗೆ ಅಷ್ಟು ಸುಲಭವಾಗಿ ಆ ಬೆಟ್ಟವನ್ನು ಹತ್ತಿಬಿಟ್ಟಳೆನ್ನುವುದು. ಸುಂದರಿ, ಸುಕೋಮಲೆಯಾದ ಸುರಭಿಯನ್ನು ಬೆಟ್ಟವೇರಲು ಕರೆದೊಯ್ಯಬೇಕೇ ಅಂತ ಪ್ರಶ್ನೆ ಮೂಡಿದಾಗ ನಾವು ಮೂವರೂ ಬೇಡವೆಂದೇ ಅಂದುಕೊಂಡಿದ್ದೆವು. ಆದರೆ ವಿಶ್ವಜಿತ್ ಹಾಗೆಲ್ಲಾ ಸುರಭಿಯನ್ನು ಬಿಟ್ಟು ಆಚೆ ಹೊರಡುವವನೇ ಅಲ್ಲ ಅಂತ ನನಗೆ, ರಮಾಕಾಂತನಿಗೆ ಗೊತ್ತಿತ್ತು. ಹಾಗಾಗಿ ವಿಶ್ವಜಿತ್ ಕಾರಣಕ್ಕೆ ಸುರಭಿ ಹೊರಟಳು ಮತ್ತು ಯಶಸ್ವಿಯಾಗಿ ನಮಗಿಂತ ಆರಾಮಾಗಿ ಬೆಟ್ಟ ಹತ್ತಿದ್ದಳು. ಅವಳು ತೊಟ್ಟ ಬಿಳಿ ಚೂಡಿದಾರ್ ಒದ್ದೆಯಾಗಿ ಮೈಗಂಟಿತ್ತು, ಅವಳು ಮುಂಗುರುಳು ಎರಡೂ ಕೆನ್ನೆಯಿಂದಲೂ ಒದ್ದೆಯಾಗಿ ಮುದ್ದಾಗಿ ಇಳಿದಿತ್ತು. ಅವಳ ಗಲ್ಲ ಬಿಸಿಲಿಗೆ ಹೊಳೆವ ಪರಿಗೇ ಅವಳು ಅಪ್ರತಿಮ ರೂಪಸಿ ಎನ್ನುವುದು ಇನ್ನೂ ಹೆಚ್ಚು ಖಚಿತವಾಯಿತು.

ಸುರಭಿಯನ್ನು ವಿಶ್ವಜಿತ್ ಇಷ್ಟಪಟ್ಟಿದ್ದ, ಪ್ರೀತಿಸಿದ್ದ, ಅವಳಿಗೂ ಅದು ಗೊತ್ತಿತ್ತು. ಅವಳು ಅವನನ್ನು ಬಾಯಿ ಬಿಡದೇ ಹಾಗೇ ಒಪ್ಪಿಕೊಂಡಿದ್ದಳಾ ಅಂತ ಕೇಳಿದರೆ ಅದಕ್ಕೆ ಇಂಥದ್ದೇ ಅಂತ ಉತ್ತರ ಇರಲಿಲ್ಲ. ಯಾಕೆಂದರೆ ಅವಳು ಅವನಿರುವಷ್ಟು ಹೊತ್ತು ಸಂಭ್ರಮಿಸುತ್ತಿದ್ದಳು, ಪ್ರತಿಯೊಂದಕ್ಕೂ ಅವನನ್ನೇ ಕೇಳುತ್ತಿದ್ದಳು. ಅವನು ತನ್ನ ಸುತ್ತ ಓಡಾಡುವಂತೆ ನೋಡಿಕೊಳ್ಳುತ್ತಿದ್ದಳು. ಇಬ್ಬರೂ ತಮಾಷೆ ಮಾಡಿಕೊಂಡು, ರೇಗಿಸಿಕೊಂಡು, ಅವಳು ಕೋಪ ಮಾಡಿಕೊಂಡರೆ ಸಮಾಧಾನಿಸಿ, ಅವನು ಸುಮ್ಮನಿದ್ದರೆ ತಾನೇ ಹೋಗಿ ಮುದ್ದುಗರೆದು ಮೇಲ್ನೋಟಕ್ಕೆ ಇಬ್ಬರ ನಡುವೆಯೂ ಪ್ರೇಮವೇ ಅದು ಎಂದು ನಿಖರವಾಗಿ ಹೇಳಬಲ್ಲಂತೆ ಸಂಬಂಧ ತೋರುತ್ತಿತ್ತು. ಆ ಅಪ್ರತಿಮ